**ಬೇಡಿಕೆ ವಾಗ್ದಾನ ಪತ್ರ (ಸಾಲ ಖಾತೆ ಸಂಖ್ಯೆ ……)**

**ರೂ………/-** **ದಿನಾಂಕ:…………**

ಬೇಡಿಕೆಯ ಮೇರೆಗೆ, ನಾನು .... ವಾಗ್ದಾನ ನೀಡುವುದೇನೆಂದರೆ, 1956 ರ ಕಂಪನಿಗಳ ಕಾಯ್ದೆ ಅನುಬಂಧದ ಅಡಿಯಲ್ಲಿ ನೋಂದಾಯಿತ ಕಂಪನಿ UNIMONI ಗೆ ಅಥವಾ ಅದರ ಕಚೇರಿ/ಶಾಖೆ .... ಆದೇಶದ ಮೇರೆಗೆ .... ರೂ. ಮೊತ್ತವನ್ನು ಇಲ್ಲಿನ ದಿನಾಂಕದಿಂದ ವಾರ್ಷಿಕ ....% ದರದ ಬಡ್ಡಿಯೊಂದಿಗೆ ಮಾಸಿಕ/ತ್ರೈಮಾಸಿಕ/ವಾರ್ಷಿಕ ಬಾಕಿ ಸಹಿತ, ಸ್ವೀಕರಿಸಿದ ಮೌಲ್ಯಕ್ಕೆ ವ್ಯತ್ಯಯವುಂಟಾದಲ್ಲಿ ಸಂಚಯಗೊಂಡಂತೆ ಪಾವತಿ ಮಾಡುವ ವಾಗ್ದಾನ ನೀಡುತ್ತೇನೆ.

**Signature Across the Stamp** Revenue Stamp Rs.1/-

**ಹೆಸರು ಮತ್ತು ಸಹಿ : …….**

ನಿಯಮಗಳು ಮತ್ತು ಷರತ್ತುಗಳು

1. ಈ ಮೇಲಿನದಕ್ಕೆ ಒಳಪಟ್ಟು ಮತ್ತು ಕಂಪನಿಯು ನಿಗದಿಸಿದಂತೆ ಮತ್ತು ಕಾಲಕಾಲಕ್ಕೆ ಸಾಲಗಾರರಿಗೆ ಸೂಚಿಸಿದಂತೆ ಸಾಲಗಾರರು ಜಾರಿಗೊಳಿಸಿದ ಬೇಡಿಕೆ ವಾಗ್ದಾನ ಪತ್ರದಲ್ಲಿ ನಿಗದಿತ ಬಡ್ಡಿ ದರವನ್ನು ಸಾಲವು ಹೊಂದಿರುತ್ತದೆ. ಈ ಉದ್ದೇಶಕ್ಕೆ, ಒಂದು ವರ್ಷ ಎಂಬುದು 360 ದಿನಗಳಾಗಿರುತ್ತವೆ.

2. ಈ ಸಾಲವನ್ನು ಪಡೆಯುವ ಉದ್ದೇಶ ಕೃಷಿಯೇತರದ್ದಾಗಿದೆ. ಕಂಪನಿಯು 22 ಕ್ಯಾರೆಟ್ ಪರಿಶುದ್ಧತೆಯ ಆಧಾರದಲ್ಲಿ ಆಭರಣಗಳನ್ನು ಮೌಲ್ಯೀಕರಿಸುತ್ತದೆ. ಆಭರಣಗಳ ಶುದ್ಧತೆಯು 22 ಕ್ಯಾರೆಟ್‌ಗಳಿಗಿಂತ ಕಡಿಮೆಯಿದ್ದರೆ, ಪ್ರತಿ ಗ್ರಾಂ ದರವನ್ನು ಲೆಕ್ಕಹಾಕಲು 22 ಕ್ಯಾರೆಟ್‌ಗಳ ಪ್ರಕಾರಕ್ಕೆ ಇದನ್ನು ಪರಿವರ್ತಿಸಲಾಗುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಸಾಲದ ಮೊತ್ತವು (ಎಲ್‌ಟಿವಿ) ಅಡವು ಇಟ್ಟ ಚಿನ್ನದ ಮೌಲ್ಯದ 75% ಅನ್ನು ಮೀರಬಾರದು. ಸಾಲದ ಮೊತ್ತ, ಚಿನ್ನದ ತೂಕ ಮತ್ತು ಪ್ರತಿ ಗ್ರಾಂ ದರಕ್ಕೆ ಸಂಬಂಧಿಸಿದಂತೆ ಕಂಪನಿಯ ನಿರ್ಧಾರವು ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಇರುತ್ತದೆ ಮತ್ತು ಅದೇ ಅಂತಿಮವಾಗಿರುತ್ತದೆ. ಸಾಲಗಾರರು ಆಯ್ಕೆ ಮಾಡಿದ ಯೋಜನೆಯನ್ನು ಆಧರಿಸಿ, ಸಾಲದ ಅವಧಿಯು ಬಟವಾಡೆ ದಿನಾಂಕದಿಂದ 3 ರಿಂದ 36 ತಿಂಗಳುಗಳು ಆಗಿರುತ್ತದೆ. ಸ್ಕೀಮ್ ನಿರ್ದಿಷ್ಟತೆಯ ನಿಯಮಗಳಿಗೆ ಹೆಚ್ಚುವರಿಯಾಗಿ, ಸಾಮಾನ್ಯ ನಿಯಮಗಳೂ ಸಾಲಗಾರರ ಮೇಲೆ ವಿಧಿಸಲ್ಪಡುತ್ತವೆ.

3. ಸಾಲಗಾರರು ಬಡ್ಡಿ ಅಥವಾ ಸಾಲದ ಮೊತ್ತದ ಬಾಕಿಯನ್ನು ಮರುಪಾವತಿಸದಿರುವ ಸಾಧ್ಯತೆಯಿದೆ ಎಂದು ಕಂಪನಿಯು ಅನುಮಾನಿಸುವ ಸಾಲಗಾರರ ಯಾವುದೇ ಮಾಹಿತಿಯು ಕಂಪನಿ ಕಂಡುಬಂದರೆ, ಸಕಾರಣವಾದ ನೋಟಿಸ್ ನೀಡುವ ಮೂಲಕ ಸಾಲದ ಅವಧಿಯಲ್ಲಿ ಸಾಲವನ್ನು ಎಲ್ಲಾ ಬಾಕಿಗಳೊಂದಿಗೆ ಮರುಪಡೆಯಲು ಅಥವಾ ಯಾವುದೇ ಸಮಯದಲ್ಲಿ ಮರುಪಾವತಿಯನ್ನು ವೇಗಗೊಳಿಸಲು ಕಂಪನಿ ಹಕ್ಕು ಹೊಂದಿದೆ. ಒದಗಿಸಿದ ಅವಧಿಯೊಳಗೆ ಬಾಕಿಯನ್ನು ಪಾವತಿ ಮಾಡಲು ಸಾಲಗಾರರು ವಿಫಲವಾದರೆ, ಆಭರಣವನ್ನು ಹರಾಜಿನಲ್ಲಿ ಮಾರಾಟ ಮಾಡಲಾಗುತ್ತದೆ.

4. ಅಡಮಾನ/ಬಟವಾಡೆ ಸಮಯದಲ್ಲಿ ನೀಡಲಾದ ಮೂಲ ಚಿನ್ನದ ಸಾಲ ರಶೀದಿಯನ್ನು, ಸಾಲವನ್ನು ಮುಕ್ತಾಯಗೊಳಿಸುವ ಮುನ್ನ ಶಾಖೆಯಲ್ಲಿ ಕಡ್ಡಾಯವಾಗಿ ಪ್ರಸ್ತುತಪಡಿಸಬೇಕು ಮತ್ತು ಇದು ಇಲ್ಲದೇ ಆಭರಣವನ್ನು ಬಿಡುಗಡೆ ಮಾಡಲಾಗುವುದಿಲ್ಲ. ಈ ಮೂಲ ರಶೀದಿ ಕಳೆದುಹೋದರೆ, ಸಾಲಗಾರರು ತಕ್ಷಣ ಕಂಪನಿಗೆ ಲಿಖಿತವಾಗಿ ವರದಿ ಮಾಡಬೇಕು. ಶಾಖೆಯಲ್ಲಿ ಅಸಲಿ ಸಾಲ ರಸೀದಿಯನ್ನು ಪ್ರಸ್ತುತಪಡಿಸಿದಾಗ ಕೇವಲ ಸಾಲಗಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಮಾತ್ರ ಆಭರಣಗಳನ್ನು ರಿಡೀಮ್ ಮಾಡಬಹುದಾಗಿದೆ ಮತ್ತು ಸಂಪೂರ್ಣ ಬಾಕಿಯನ್ನು ತೆರವುಗೊಳಿಸಲಾಗುತ್ತದೆ.

5. ಎಲ್ಲ ಪಾವತಿಗಳು ಮತ್ತು ರಸೀದಿಗಳಿಗೆ ಸಿಸ್ಟಂ ಜನರೇಟ್ ಮಾಡಿದ ರಸೀದಿಗಳನ್ನು ಮಾತ್ರ ಕಂಪನಿ ವಿತರಿಸುತ್ತದೆ ಮತ್ತು ಯಾವುದೇ ರೀತಿಯ ಪಾವತಿಗಳು ಅಥವಾ ರಸೀದಿಗಳಿಗೆ ಮ್ಯಾನ್ಯುಅಲ್ ರಸೀದಿಗಳನ್ನು ವಿತರಿಸಲಾಗುವುದಿಲ್ಲ. ಶಾಖೆಯ ಹೊರಗೆ ಪಾವತಿ ಸಮ್ಮತಿಸಿದರೆ, ಪಾವತಿ ದೃಢೀಕರಣ ಎಸ್‌ಎಂಎಸ್ ಅನ್ನು ಸಾಲಗಾರರ ನೋಂದಾಯಿತ ಮೊಬೈಲ್ ಸಂಖ್ಯೆಗೆ ತಕ್ಷಣ ಕಳುಹಿಸಲಾಗುತ್ತದೆ.

6. ಶುಲ್ಕಗಳು ಅಥವಾ ಬಡ್ಡಿ ದರ ಯಾವುದೇ ಪ್ರಸ್ತುತ ನಿಯಮ ಮತ್ತು ಷರತ್ತುಗಳನ್ನು ತಿದ್ದುಪಡಿ ಮಾಡುವ ಮತ್ತು/ಅಥವಾ ಸಾಲಗಾರರ ಸಾಲ ಖಾತೆಗೆ ಯಾವುದೇ ಶುಲ್ಕಗಳು/ಫೀಗಳನ್ನು ಪರಿಚಯಿಸುವ (ನಂತರ ಅನ್ವಯವಾಗುವಂತೆ) ಹಕ್ಕನ್ನು ಕಂಪನಿ ಕಾಯ್ದಿರಿಸುತ್ತದೆ. **ಸಾಲವನ್ನು ಪಡೆಯುವ ಸಮಯದಲ್ಲಿ ಸಾಲಗಾರರು ಕಂಪನಿಗೆ ನೀಡಿದ ಮೊಬೈಲ್ ನಂ. ಅಥವಾ ಇಮೇಲ್ ಐಡಿಗೆ ಎಸ್‌ಎಂಎಸ್ ಅಥವಾ ಇಮೇಲ್ ಮೂಲಕ ಸಾಲಗಾರರಿಗೆ (ಅವರು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿ) ಇದನ್ನು ಸೂಚನೆ ನೀಡಲಾಗುತ್ತದೆ. ಇಂತಹ ಸೂಚನೆಯ ವಿತರಿಸಿದ 7 ದಿನಗಳೊಳಗೆ ವಿವಾದಕ್ಕೊಳಪಡದಿದ್ದರೆ ಇವನ್ನು ಡೆಲಿವರಿ ಮಾಡಲಾಗಿದೆ, ಸ್ವೀಕರಿಸಲಾಗಿದೆ ಮತ್ತು ಸಮ್ಮತಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.** ಒದಗಿಸಿದ ಫೋನ್ ನಂಬರ್/ ಇಮೇಲ್ ಐಡಿ/ ವಿಳಾಸದಲ್ಲಿ

ಯಾವುದೇ ಬದಲಾವಣೆಯನ್ನು ಸಾಲಗಾರರು ಲಿಖಿತವಾಗಿ ಕಂಪನಿಗೆ ಸೂಚನೆ ನೀಡಬೇಕು. ಇದಕ್ಕೆ ವಿಫಲವಾದರೆ, ಇಂತಹ ಸೂಚನೆಗಳು ತಲುಪದೇ ಇರುವುದಕ್ಕೆ ಕಂಪನಿಯು ಜವಾಬ್ದಾರಿಯಲ್ಲ.

7. ಯುನಿಮೋನಿ ಬಡ್ಡಿ ದರ ಮಾದರಿಯನ್ನು ಆಧರಿಸಿ ಬಡ್ಡಿ ದರವನ್ನು ಲೆಕ್ಕ ಮಾಡಲಾಗುತ್ತದೆ ಮತ್ತು ಇದು ಫಂಡ್‌ಗಳ ವೆಚ್ಚ, ವಹಿವಾಟು ವೆಚ್ಚಗಳು, ರಿಸ್ಕ್ ಪ್ರೀಮಿಯಂ ಮತ್ತು ಈಕ್ವಿಟಿಯ ಮೇಲೆ ನಿರೀಕ್ಷಿತ ಕನಿಷ್ಠ ವಾಪಸಾತಿಯಂತಹ ಸೂಕ್ತ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಸಾಲಗಾರರ ವರ್ಗದ ಮಧ್ಯೆ ತಾರತಮ್ಯ ನಡೆಸದ ರಿಸ್ಕ್‌ನ ಶ್ರೇಣೀಕರಣದ ಸಮಗ್ರ ವಿಧಾನವನ್ನು ನಾವು ಅಳವಡಿಸಿಕೊಂಡಿದ್ದೇವೆ. ಪ್ರತಿ ಸಾಲದ ಬಡ್ಡಿ ದರವನ್ನು ನಾವು ಪ್ರತ್ಯೇಕವಾಗಿ ನಿಗದಿಸುತ್ತೇವೆ.

8. ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ ನಿಗದಿತ ಸಾಲದ ಅವಧಿಯಲ್ಲಿ ಸಾಲವನ್ನು ಮರುಪಾವತಿ ಮಾಡಲು ಸಾಲಗಾರರು ವಿಫಲವಾದರೆ, ಆಭರಣದ ವಿರುದ್ಧ ಮುಂದುವರಿಯುವಂತೆ ಕಂಪನಿಗೆ ಅವರು ಅಧಿಕಾರ ನೀಡುತ್ತಾರೆ. ದಿನಪತ್ರಿಕೆಯಲ್ಲಿ ಪ್ರಕಟಿಸುವುದರ ಜೊತೆಗೆ, ಹರಾಜಿಗಿಂತಲೂ ಮೊದಲು ಬಾಕಿಯನ್ನು ಪಾವತಿ ಮಾಡಲು ಸಾಲಗಾರರಿಗೆ ವಿನಂತಿಸುವ ನೋಂದಾಯಿತ ನೋಟಿಸ್ ಅನ್ನು ಕಂಪನಿಯು ಕಳುಹಿಸುತ್ತದೆ. ಹರಾಜಿನ ನಂತರ, ಕಡಿಮೆಯಾದಲ್ಲಿ, ಕಡಿಮೆ ಆದ ಮೊತ್ತವನ್ನು ಕಂಪನಿಗೆ ಪಾವತಿ ಮಾಡಲು ಸಾಲಗಾರರು ಈ ಮೂಲಕ ಸಮ್ಮತಿಸುತ್ತಾರೆ ಮತ್ತು ಇದರಲ್ಲಿ ವಿಫಲವಾದರೆ, ಅಂತಹ ಕಡಿಮೆಯಾದ ಮೊತ್ತವನ್ನು ವಸೂಲಿ ಮಾಡಲು ಸಾಲಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕಂಪನಿಯು ಹಕ್ಕು ಹೊಂದಿರುತ್ತದೆ. ಪ್ರತಿ ನೋಂದಾಯಿತ ನೋಟಿಸ್‌ಗೆ ರೂ. 50/- ಅನ್ನು ಸಾಲಗಾರರು ನೋಟಿಸ್ ಶುಲ್ಕವನ್ನಾಗಿ ಭರಿಸುತ್ತಾರೆ.

9. ಸಕಾರಣ ಸಮಯ ಎಂದು ಸಾಲಗಾರರು ಒಪ್ಪುವ, 7 ದಿನಗಳ ಸಮಯವನ್ನು ಮಾರ್ಜಿನ್ ಪೂರೈಸಲು ಸಾಲಗಾರರಿಗೆ ನೀಡಿದ ನಂತರ ಕಂಪನಿಯು ಹರಾಜಿನ ಬಗ್ಗೆ ಗ್ರಾಹಕರಿಗೆ ಸೂಚನೆ ನೀಡಬೇಕು. ಎರಡು ದಿನಪತ್ರಿಕೆಗಳಲ್ಲಿ, ಈ ಪೈಕಿ ಒಂದು ಪ್ರಾಂತೀಯ ಭಾಷೆ ಮತ್ತು ಇನ್ನೊಂದು ರಾಷ್ಟ್ರೀಯ ದೈನಂದಿನ ದಿನಪತ್ರಿಕೆ ಆಗಿರಬೇಕಾಗಿದ್ದು, ಜಾಹೀರಾತು ನೀಡುವ ಮೂಲಕ ಸಾರ್ವಜನಿಕರಿಗೆ ಹರಾಜಿನ ಬಗ್ಗೆ ಮಾಹಿತಿ ನೀಡಲಾಗುತ್ತದೆ.

10. ಕಂಪನಿಗೆ ಸಾಲಗಾರರಿಂದ ಸಾಲದ ಮೊತ್ತ ಬಾಕಿ ಇರುವವರೆಗೂ, ಸಾಲ ಮೊತ್ತದ 25% ಮಾರ್ಜಿನ್ ಅನ್ನು ಎಲ್ಲ ಸಮಯದಲ್ಲೂ ಸಾಲಗಾರರು ಕಂಪನಿಯೊಂದಿಗೆ ಕಾಯ್ದುಕೊಳ್ಳಬೇಕು ಅಥವಾ ಕಾಯ್ದುಕೊಳ್ಳಲು ಕಾರಣವಾಗಬೇಕು. ಅಡಮಾನದ ಮೌಲ್ಯದ ಲೆಕ್ಕಾಚಾರವು ಸಂಬಂಧಿಸಿದ ಅಡಮಾನದ ಮಾರುಕಟ್ಟೆ ಬೆಲೆಯನ್ನು ಆಧರಿಸಿರುತ್ತದೆ. ಅಡಮಾನ/ಮಾರ್ಜಿನ್ ಲಭ್ಯವಿರುವ ದನಾಂಕ ಮತ್ತು ಸಮಯವನ್ನು ಕಂಪನಿಯು ನಿರ್ಧರಿಸಬಹುದು ಎಂದು ಸಾಲಗಾರರು ಸಮ್ಮತಿಸುತ್ತಾರೆ ಮತ್ತು ಮಾರ್ಜಿನ್/ ಅಡಮಾನದ ಕೊನೆಯ ದಿನಾಂಕವು ಮುಗಿದ ನಂತರ ಯಾವುದೇ ಪಾವತಿಯನ್ನು ಸಮ್ಮತಿಸಲು ಕಂಪನಿಯು ನಿರಾಕರಿಸಬಹುದು.

11. ಪ್ಯಾರಾ ನಂ. 8 ರಲ್ಲಿ ಒಳಗೊಂಡಿರುವುದಕ್ಕೆ ಸಂಬಂಧಿಸಿಲ್ಲದಂತೆ, ಮಾರ್ಜಿನ್ 20% ಕ್ಕಿಂತ ಕಡಿಮೆ ಇದ್ದಲ್ಲಿ, ಅವಧಿ ಮುಗಿಯುವುದಕ್ಕೂ ಮುನ್ನವೇ ತಕ್ಷಣದಲ್ಲೇ, ಯಾವುದೇ ಸಮಯದಲ್ಲಿ ಸಾರ್ವಜನಿಕ ಹರಾಜು ಅಥವಾ ಖಾಸಗಿ ಹೊಂದಾಣಿಕೆಯ ಮೂಲಕ ಆಭರಣಗಳನ್ನು ಮಾರಾಟ ಮಾಡುವ ಹಕ್ಕನ್ನು ಕಂಪನಿ ಕಾಯ್ದಿರಿಸಿದೆ. ಮಾರ್ಜಿನ್ ಪೂರೈಸಲು ಸಾಲಗಾರರಿಗೆ 7 ದಿನಗಳ ಕಾಲಾವಧಿಯನ್ನು ನೀಡಿದ ನಂತರ ಕಂಪನಿಯು ಹರಾಜನ್ನು ಆರಂಭಿಸಲಿದ್ದು, ಇದನ್ನು ಸಕಾರಣ ಸಮಯ ಎಂದು ಸಾಲಗಾರರು ಸಮ್ಮತಿಸುತ್ತಾರೆ.

12. ಅಡಮಾನವಿಟ್ಟ ಆಭರಣವು ಸಾಲಗಾರರ ನಿರಯು ಸ್ವತ್ತಾಗಿರುತ್ತದೆ, ಇದರ ಮೇಲೆ ಯಾವುದೇ ಇತರ ವ್ಯಕ್ತಿಯ ಹಕ್ಕು, ಹಿತಾಸಕ್ತಿ ಅಥವಾ ಕ್ಲೇಮ್ ಅನ್ನು ಹೊಂದಿರುವುದಿಲ್ಲ ಮತ್ತು ಅವುಗಳನ್ನು ಅಡವಿಡುವ ನಿರಯು ಹಕ್ಕನ್ನು ಸಾಲಗಾರರು ಹೊಂದಿರುತ್ತಾರೆ. ಆಭರಣದ ಶೀರ್ಷಿಕೆಯಲ್ಲಿ ಯಾವುದೇ ದೋಷವಿದ್ದಲ್ಲಿ, ಎಲ್ಲ ಅಪಾಯ, ವೆಚ್ಚ ಮತ್ತು ಪರಿಣಾಮಗಳ ವಿರುದ್ಧ ಕಂಪನಿಗೆ ವೆಚ್ಚ ರಕ್ಷಣೆಯನ್ನು ಸಾಲಗಾರರು ಒದಗಿಸಬೇಕು.

13. ಯಾವುದೇ ಮುಂಗಡಗಳು/ಸಾಲಗಳನ್ನು ಪಡೆಯುವ ಉದ್ದೇಶಕ್ಕೆ ಯಾವುದೇ ವ್ಯಕ್ತಿ/ಕಂಪನಿ/ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗೆ ಚಿನ್ನದ ಆಭರಣಗಳೊಂದಿಗೆ (ಅಡಮಾನವಿಟ್ಟ ಭದ್ರತೆ) ನಿಮ್ಮ ಸಾಲದ ಮೇಲಿನ ತನ್ನ ಎಲ್ಲ ಹಕ್ಕನ್ನು ವರ್ಗಾವಣೆ ಮಾಡುವ, ಅಡಮಾನ ಇಡುವ, ಮಾರಾಟ ಮಾಡುವ ಅಥವಾ ನಿಯೋಜನೆ ಮಾಡುವ ಹಕ್ಕನ್ನು ಕಂಪನಿ ಕಾಯ್ದಿರಿಸಿದೆ ಮತ್ತು ಸಾಲಗಾರರು ಈ ಬಗ್ಗೆ ಅರಿವು ಹೊಂದಿರುತ್ತಾರೆ ಮತ್ತು ಈ ಮೂಲಕ ಅವರು ಯಾವುದೇ ಆಕ್ಷೇಪಣೆ ಮಾಡದಿರಲು ಸಮ್ಮತಿಸುತ್ತಾರೆ.

14. ಈ ಸಾಲಕ್ಕೆ ಭದ್ರತೆಯಾಗಿ ಒದಗಿಸಿದ ಚಿನ್ನದ ಆಭರಣಗಳ ಮೇಲೆ ಐಚ್ಛಿಕ ಒಪ್ಪಂದ ಮಾಡಿಕೊಳ್ಳುವ ಮೂಲಕ ಬೆಲೆ ಅಪಾಯವನ್ನು ಅಡಮಾನ ಇಡಲು ಕಂಪನಿಗೆ ಸಾಲಗಾರರು ಅಧಿಕಾರ ನೀಡುತ್ತಾರೆ ಮತ್ತು ಐಚ್ಛಿಕ ಕರಾರಿಗೆ ಸಂಬಂಧಿಸಿದಂತೆ ಅನುಪಾತದ ಪ್ರೀಮಿಯಂ ಅನ್ನು ಪಾವತಿ ಮಾಡಲು ಸಮ್ಮತಿಸುತ್ತಾರೆ.

15. ಎಲ್ಲಾ ಅಡಮಾನವಿಟ್ಟ ಆಭರಣಗಳಿಗೆ ಕಂಪನಿಯು ವಿಮೆ ಮಾಡಿಸುತ್ತದೆ. ಆದಾಗ್ಯೂ, ಕೆಲವು ಗುಣಮಟ್ಟ ಅಥವಾ ಆಭರಣದ ತಯಾರಿಕೆಯಿಂದಾಗಿ, ಯಾವುದೇ ನಷ್ಟವಾದಲ್ಲಿ ಕಂಪನಿಯು ಜವಾಬ್ದಾರನಲ್ಲ. ಆದಾಗ್ಯೂ, ಕಂಪನಿ ಅಥವಾ ಅದರ ಉದ್ಯೋಗಿಗಳ ನಿರ್ಲಕ್ಷ್ಯದಿಂದಾಗಿ ಇದು ಉಂಟಾದಲ್ಲಿ ಕಂಪನಿಯು ಎಲ್ಲಾ ಬಾಧ್ಯತೆಯನ್ನು ತೆಗೆದುಕೊಳ್ಳುತ್ತದೆ.

16. ವಾಸ್ತವಾಂಶಗಳ ತಪ್ಪು ಪ್ರತಿನಿಧಿತ್ವದ ಮೂಲಕ ಸಾಲವನ್ನು ಪಡೆಯಲಾಗಿದೆ ಎಂದು ಕಂಪನಿ ಅಭಿಪ್ರಾಯಪಡುವುದೂ ಸೇರಿದಂತೆ ಸಾಲ ಮಂಜೂರಾದ ಅವಧಿ ಮುಗಿಯುವುದಕ್ಕೂ ಯಾವುದೇ ಮೊದಲಿನ ಸಮಯದಲ್ಲಿ ಸಾಲವನ್ನು ಹಿಂಪಡೆಯುವ ಎಲ್ಲಾ ಹಕ್ಕನ್ನು ಕಂಪನಿ ಹೊಂದಿರುತ್ತದೆ. ಹೀಗೆ ಬೇಡಿಕೆ ಇಟ್ಟಲ್ಲಿ, ಬಡ್ಡಿಯ ಸಮೇತ ಒಟ್ಟು ಸಾಲವನ್ನು ಮರುಪಾವತಿ ಮಾಡಬೇಕು ಮತ್ತು ಅಡಮಾನವಿಟ್ಟ ಚಿನ್ನವನ್ನು ಬಿಡಿಸಿಕೊಳ್ಳಬೇಕು.

17. ಸಾಲ ವಿವರಗಳೂ ಸೇರಿದಂತೆ ಎಲ್ಲಾ ಷರತ್ತುಗಳಿಗೆ ಸಾಲಗಾರರು ಬದ್ಧವಾಗಲು ಸಮ್ಮತಿಸುತ್ತಾರೆ ಮತ್ತು ಕೆಲವು ನಿಯಮ ಮತ್ತು ಷರತ್ತುಗಳ ವ್ಯತ್ಯಯ ಮತ್ತು/ಅಥವಾ ಉಲ್ಲಂಘನೆ ಉಂಟಾದಲ್ಲಿ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಸೂಕ್ತ ವೇದಿಕೆಯಲ್ಲಿ ಕಾನೂನಾತ್ಮಕ ಪರಿಹಾರದ ಹಕ್ಕನ್ನು ಯುನಿಮೋನಿ ಹೊಂದಿರುತ್ತದೆ.

18. (ಎ) ಮಂಜೂರಾತಿಯ ಅರ್ಜಿ ಮತ್ತು ಸಾಲ ಮರುಪಾವತಿ (ಬಿ) ಬಡ್ಡಿಯೊಂದಿಗೆ ಸಾಲದ ವಸೂಲಾತಿ ಮತ್ತು ನಗದೀಕರಣ (ಸಿ) ಭದ್ರತೆಯ ಜಾರಿ (ಡಿ) ಎಲ್ಲಾ ತೆರಿಗೆಗಳು ಮತ್ತು ಯಾವುದೇ ಇತರ ಶುಲ್ಕಗಳು ಮತ್ತು ಭದ್ರತೆಗೆ ಸಂಬಂಧಿಸಿದಂತೆ ಮತ್ತು ಭದ್ರತೆಯ ವಿಮೆಯ ಶುಲ್ಕಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಶುಲ್ಕಗಳು, ಬಡ್ಡಿ ತೆರಿಗೆ, ಸೇವಾ ತೆರಿಗೆ (ಸ್ಟಾಂಪ್ ಡ್ಯೂಟಿ ಸೇರಿದಂತೆ), ಜಿಎಸ್‌ಟಿ ಮತ್ತು ತೆರಿಗೆಗಳು (ಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರದಿಂದ ಕಾಲಕಾಲಕ್ಕೆ ವಿಧಿಸಬಹುದಾದ ಯಾವುದೇ ವಿವರಣೆಯ) ಹಾಗೂ ಎಲ್ಲಾ ಇತರ ವೆಚ್ಚ ಮತ್ತು ಖರ್ಚುಗಳಿಗೆ ಎಲ್ಲಾ ಬದಲಾವಣೆಗಳನ್ನು ಸಾಲಗಾರರು ಮರುಪಾವತಿ ಮಾಡಬೇಕು, ಭರಿಸಬೇಕು ಮತ್ತು ಪಾವತಿ ಮಾಡಬೇಕು.

19. ಎಲ್ಲಾ ಬಾಕಿ ಖಾತೆಗಳ ಅಸಲು ಬಾಕಿಯ ಮೇಲೆ ಸಂಚಿತ ಬಡ್ಡಿಯನ್ನು ವಿಧಿಸಲಾಗುತ್ತದೆ. ತನ್ನ ಏಕಪಕ್ಷೀಯ ಅಧಿಕಾರದಲ್ಲಿ ಯಾವುದೇ ಸಮಯದಲ್ಲಿ ದಂಡ ಬಡ್ಡಿ ದರವನ್ನು ಬದಲಿಸುವ ಅಥವಾ ತಿದ್ದುಪಡಿ ಮಾಡುವ ಹಕ್ಕನ್ನು ಕಂಪನಿ ಕಾಯ್ದಿರಿಸಿದೆ.

20. ಕಾನೂನು ಮತ್ತು/ಅಥವಾ ನಿಯಂತ್ರಕ ಅಗತ್ಯಗಳಿಗೆ ಬದ್ಧವಾಗುವ ಉದ್ದೇಶಕ್ಕೆ ಕಂಪನಿ, ಕ್ರೆಡಿಟ್ ಬ್ಯೂರೋ, ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು, ಡೇಟಾ ಬ್ಯಾಂಕ್ ಅಥವಾ ಯಾವುದೇ ಸರ್ಕಾರಿ ಅಥವಾ ನಿಯಂತ್ರಕ ಪ್ರಾಧಿಕಾರಗಳು/ಮಂಡಳಿಗಳು/ಇಲಾಖೆಗಳ ಅಂಗಸಂಸ್ಥೆಗಳಿಗೆ ಒದಗಿಸಿದ/ಒದಗಿಸಲಾಗುವ ಯಾವುದೇ ಕ್ರೆಡಿಟ್ ಸೌಲಭ್ಯ/ಸಾಲಗಳಿಗೆ ಸಂಬಂಧಿಸಿದ ಎಲ್ಲಾ/ಯಾವುದೇ ಮಾಹಿತಿ ಮತ್ತು/ಅಥವಾ ಡೇಟಾವನ್ನು ಕಂಪನಿಗೆ ಬಹಿರಂಗಗೊಳಿಸುವ ಮತ್ತು ಒದಗಿಸುವ ಅಧಿಕಾರವನ್ನು ಸಾಲಗಾರರು ಹೊಂದಿರುತ್ತಾರೆ.

21. ಎಲ್ಲಾ ಸಂಹನಕ್ಕಾಗಿನ ವಿಳಾಸವು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ್ದಾಗಿರುತ್ತದೆ. ವಿಳಾಸದಲ್ಲಿನ ಯಾವುದೇ ಬದಲಾವಣೆಗೆ, ಲಿಖಿತ ಸೂಚನೆ ಅಗತ್ಯವಿದೆ ಮತ್ತು ಕಂಪನಿಯಿಂದ ಸ್ವೀಕೃತಿ ರೂಪದಲ್ಲಿರಬೇಕು.

22. ಅಂಚೆ/ಕೊರಿಯರ್/ನೋಂದಾಯಿತ ಎ.ಡಿ/ಇಮೇಲ್/ ಟೆಲಿಕಮ್ಯೂನಿಕೇಶನ್/ ಎಸ್‌ಎಂಎಸ್ ಕಳುಹಿಸುವ ಮೂಲಕವೂ ಸೇರಿದಂತೆ, ಆದರೆ ಅದಕ್ಕೆ ಸೀಮಿತಗೊಳ್ಳದಂತೆ ಈ ಯಾವುದೇ ಒಂದು ಅಥವಾ ಹೆಚ್ಚು ವಿಧಾನದಲ್ಲಿ ಸಾಲಗಾರರೊಂದಿಗೆ ಕಂಪನಿಯು ಸಂವಹನ ಮಾಡಬಹುದು. ಇಂತಹ ಸಂವಹನವನ್ನು ಕಂಪನಿಯು ಮಾಡಿದರೆ, ಸಾಲಗಾರರು ಸ್ವೀಕರಿಸಿದ್ದಾರೆ ಎಂದು ಭಾವಿಸಲಾಗುತ್ತದೆ ಮತ್ತು ವಿಳಂಬ ಸ್ವೀಕೃತಿ, ವಿಳಾಸ/ನಂಬರ್ ಬದಲಾವಣೆಯಿಂದಾಗಿ ಅಥವಾ ಯಾವುದೇ ಕಾರಣಕ್ಕೆ ಸ್ವೀಕರಿಸಿಲ್ಲದಿರುವಿಕೆ ಸೇರಿದಂತೆ ಇದನ್ನು ಯಾವುದೇ ಆಧಾರಲ್ಲಿ ಸಾಲಗಾರರು ಎಂದಿಗೂ ಪ್ರಶ್ನಿಸುವುದಿಲ್ಲ ಎಂದು ಸಾಲಗಾರರು ಸಮ್ಮತಿಸುತ್ತಾರೆ ಮತ್ತು ಒಪ್ಪುತ್ತಾರೆ.

23. ಈ ಸಾಲದ ಮೂಲಕ ಪಡೆದ ಹಣವನ್ನು ಪ್ರಾಥಮಿಕ ಚಿನ್ನ, ಗೋಲ್ಡ್ ಬುಲಿಯನ್, ಚಿನ್ನದ ಆಭರಣ, ಚಿನ್ನದ ನಾಣ್ಯಗಳು, ಗೋಲ್ಡ್ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳ (ಇಟಿಎಫ್) ಯೂನಿಟ್‌ಗಳು ಮತ್ತು ಚಿನ್ನದ ಮ್ಯೂಚುವಲ್ ಫಂಡ್‌ಗಳ ಯೂನಿಟ್‌ಗಳ ಖರೀದಿಗೆ ಬಳಸುವುದಿಲ್ಲ ಎಂದು ಸಾಲಗಾರರು ದೃಢೀಕರಿಸುತ್ತಾರೆ.

24. ಬಡ್ಡಿ ಪಾವತಿ ಜ್ಞಾಪನೆಗಳು ಮತ್ತು/ಅಥವಾ ಕಂಪನಿಯ ಯಾವುದೇ ಇತರ ಉತ್ಪನ್ನಗಳಿಗೆ ಎಸ್‌ಎಂಎಸ್/ಕರೆ ಸ್ವೀಕರಿಸಲು ಸಾಲಗಾರರು ಯಾವುದೇ ಆಕ್ಷೇಪಣೆಯನ್ನು ಹೊಂದಿರುವುದಿಲ್ಲ.

25. ಸಾಲಕ್ಕಾಗಿ ಬ್ಯಾಂಕ್‌ಗಳು/ಎಫ್‌ಐಗಳಿಂದ ಹಣಕಾಸು ನೆರವನ್ನು ಕಂಪನಿ ಪಡೆದಿದೆ ಎಂದು ಸಾಲಗಾರರಿಗೆ ತಿಳಿದಿದೆ. ಕಂಪನಿಯು ಅಭಿವ್ಯಕ್ತಿಪೂರ್ವಕವಾಗಿ ಅಧಿಕಾರ ನೀಡಿದರೆ, ಅಂತಹ ಬ್ಯಾಂಕ್/ಎಫ್‌ಐಗಳಿಂದ ಜಾರಿಯಾದ ನೋಟಿಸ್ ಸ್ವೀಕರಿಸುತ್ತಿದ್ದಂತೆಯೇ ಅಂತಹ

ಬ್ಯಾಂಕ್/ಎಫ್ಐಗಳಿಗೆ ನೇರವಾಗಿ ಬಾಕಿ ಇರುವ ಮೊತ್ತವನ್ನು ಪಾವತಿ ಮಾಡಲು ಸಾಲಗಾರರು ಈ ಮೂಲಕ ಸಮ್ಮತಿಸುತ್ತಾರೆ ಮತ್ತು ಕಂಪನಿಗೆ ಸಾಲಗಾರರ ಪಾವತಿ ಬಾಧ್ಯತೆಗಳನ್ನು ಅಂತಹ ಪಾವತಿಯು ಒಳಪಟ್ಟಿರುತ್ತದೆ.

26. ಸಾಲವನ್ನು ಮಂಜೂರು ಮಾಡುವ ಮೂಲಕ, ಅಡಮಾನವಿಟ್ಟ ಆಭರಣವು 22 ಕ್ಯಾರಟ್ ಪರಿಶುದ್ಧತೆಯದ್ದಾಗಿದೆ ಎಂದು ಕಂಪನಿಯು ದೃಢೀಕರಿಸುವುದಿಲ್ಲ ಅಥವಾ ಸಮ್ಮತಿಸುವುದಿಲ್ಲ. ಸೂಕ್ತ ವಿಧಾನಗಳ ಮೂಲಕ ಆಭರಣದ ಶುದ್ಧತೆಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಕಂಪನಿ ಮುಕ್ತವಾಗಿದೆ ಮತ್ತು ಯಾವುದೇ ಸಮಯದಲ್ಲಿ ಅಡಮಾನವಿಟ್ಟ ಆಭರಣವು ಕಡಿಮೆ ಶುದ್ಧತೆಯನ್ನು ಹೊಂದಿದೆ ಅಥವಾ ಯಾವುದೇ ರೀತಿಯಲ್ಲಿ ಹುಸಿಯಾಗಿದೆ ಎಂದು ಕಂಪನಿ ಕಂಡುಕೊಂಡರೆ, ಕಂಪನಿಯ ಇಂತಹ ಕಂಡುಕೊಳ್ಳುವಿಕೆಗೆ ಸಾಲಗಾರರು ಬದ್ಧವಾಗಿರುತ್ತಾರೆ ಮತ್ತು ತಕ್ಷಣವೇ ಸಾಲ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ಮತ್ತು ಕಂಪನಿಗೆ ಉಂಟಾದ ನಷ್ಟವನ್ನು ಭರಿಸಲು ಬಾಧ್ಯವಾಗಿರುತ್ತಾರೆ ಮತ್ತು ಇದಕ್ಕೆ ವಿಫಲವಾದಲ್ಲಿ, ಇಂತಹ ನಷ್ಟವನ್ನು ವಸೂಲಾತಿ ಮಾಡಲು ಸೂಕ್ತ ಕಾನೂನು ಕ್ರಮವನ್ನು ಆರಂಭಿಸಲು ಕಂಪನಿಯು ಹಕ್ಕು ಹೊಂದಿದೆ.

27. ಸಾಲ ದಾಖಲೆ ಮತ್ತು ಸಾಲ ಪಡೆಯುವುದಕ್ಕೆ ಸಂಬಂಧಿಸಿದ ಎಲ್ಲ ಇತರ ದಾಖಲೆಯ ವಿಷಯವನ್ನು ತನಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿದೆ ಮತ್ತು ವಿವರಿಸಲಾಗಿದೆ ಎಂದು ಸಾಲಗಾರರು ಪ್ರತಿನಿಧಿಸುತ್ತಾರೆ ಮತ್ತು ದೃಢೀಕರಿಸುತ್ತಾರೆ.

28. ನಮೂದಿಸಿದ ಸಾಲ ಮತ್ತು ಷರತ್ತುಗಳ ಪ್ರತಿಯನ್ನು ಸ್ವೀಕರಿಸಿದ್ದೇನೆ ಎಂದು ಸಾಲಗಾರರು ದೃಢೀಕರಿಸುತ್ತಾರೆ.

29. ಈ ಸಾಲ ದಾಖಲೆಯ ನಿಯಮ ಮತ್ತು ಷರತ್ತುಗಳನ್ನು ಪರಿಷ್ಕರಿಸಲು ಯುನಿಮೊನಿ ಅಧಿಕಾರ ಹೊಂದಿದೆ ಎಂದು ನಾನು ಈ ಮೂಲಕ ಸಮ್ಮತಿಸುತ್ತೇನೆ ಮತ್ತು ಇದನ್ನು ನನಗೆ ಯುನಿಮೊನಿ ಸೂಚನೆ ನೀಡುತ್ತದೆ.

30. ಸಾಲಗಾರರು ತನ್ನ ಸಾಲವನ್ನು ಮುಂಗಡ ಮುಕ್ತಾಯ ಮಾಡುವ ಸಂದರ್ಭದಲ್ಲಿ ಅಸಲು ಬಾಕಿ ಮೊತ್ತದ ಮೇಲೆ 0.25% ಮುಂಗಡ ಮುಕ್ತಾಯ ಶುಲ್ಕವನ್ನು ಸಾಲಗಾರರಿಗೆ ವಿಧಿಸಲಾಗುತ್ತದೆ.

31. ತಾನು ಪಡೆದ ಸಾಲ ಸೌಲಭ್ಯಕ್ಕೆ ಸಂಬಂಧಿಸಿದ ಮಾಹಿತಿ ಅಥವಾ ಡೇಟಾವನ್ನು ಕ್ರೆಡಿಟ್ ಮಾಹಿತಿ ಬ್ಯೂರೋ (ಭಾರತ) ಲಿ. ಮತ್ತು/ಅಥವಾ ಆರ್‌ಬಿಐ ಅಥವಾ ಇತರ ಶಾಸನಾತ್ಮಕ ಮಂಡಳಿಯ ಪರವಾಗಿ ಇದಕ್ಕೆ ಸಂಬಂಧಿಸಿದಂತೆ ಅಧಿಕಾರ ಹೊಂದಿರುವ ಯಾವುದೇ ಇತರ ಏಜೆನ್ಸಿಗೆ ಬಹಿರಂಗಗೊಳಿಸಲು ಸಾಲಗಾರರು ಈ ಮೂಲಕ ಕಂಪನಿಗೆ ಸಮ್ಮತಿಸುತ್ತಾರೆ. ಇಂತಹ ಮಾಹಿತಿಯನ್ನು ತಮಗೆ ಹೊಂದಿಕೆಯಾಗುವ ರೀತಿಯಲ್ಲಿ ಅಂತಹ ಏಜೆನ್ಸಿಗಳು ಬಳಸಬಹುದು ಅಥವಾ ಹಂಚಿಕೊಳ್ಳಬಹುದು ಎಂದು ಸಾಲಗಾರರು ಅರಿವು ಹೊಂದಿದ್ದಾರೆ.

32. ಈ ಸಾಲಕ್ಕೆ ಸಂಬಂಧಿಸಿದಂತೆ ಉಂಟಾದ ಯಾವುದೇ ವಿವಾದಗಳನ್ನು 1996ರ ರಾಜಿ ಮತ್ತು ಸಂಧಾನ ಕಾಯ್ದೆಯ ಅನುಬಂಧಗಳ ಪ್ರಕಾರ ಕಂಪನಿಯು ನೇಮಿಸಿದ ಏಕಪಕ್ಷೀಯ ರಾಜಿದಾರರಿಗೆ ಉಲ್ಲೇಖಿಸಲಾಗುತ್ತದೆ. ರಾಜಿಯ ಸ್ಥಳವು ಎರ್ನಾಕುಲಂ ಆಗಿರುತ್ತದೆ. ಈ ವಹಿವಾಟು ಎರ್ನಾಕುಲಂ ನ್ಯಾಯಾಲಯದ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಡುತ್ತದೆ.

33. **ದಂಡ ಬಡ್ಡಿ ದರವನ್ನು ಸಾಲ ಮುಕ್ತಾಯದ ದಿನಾಂಕದವರೆಗೆ ಅವಧಿ ಮುಕ್ತಾಯಗೊಂಡ ಪ್ರಕರಣಗಳಿಗೆ ಅಸಲಿನ ಮೇಲೆ 11.88% ರಷ್ಟು ವಿಧಿಸಲಾಗುತ್ತದೆ.**

34. **ಬಾಕಿ ದಿನಾಂಕದ ನಂತರ ಎಲ್ಲ ಡೀಫಾಲ್ಟ್ ಗ್ರಾಹಕರಿಗೆ ವಾರ್ಷಿಕ 3.6% ದಂಡ ಬಡ್ಡಿಯು ಅನ್ವಯಿಸುತ್ತದೆ.**

35. ಸಾಲದ ನಿಯಮ ಮತ್ತು ಷರತ್ತುಗಳನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ ಮತ್ತು ಅರ್ಥ ಮಾಡಿಕೊಂಡಿದ್ದೇನೆ ಮತ್ತು ಸಮ್ಮತಿಸುತ್ತೇನೆ. ಇದರ ಪ್ರತಿಯನ್ನು ನನಗೆ ನೀಡಲಾಗಿದೆ. ಈ ಮೇಲಿನ ಆಭರಣವು ನನ್ನ ಸ್ವಂತದ್ದೆಂದು ನಾನು ಘೋಷಿಸುತ್ತೇನೆ. ಆಭರಣಗಳಲ್ಲಿ ಹವಳಗಳನ್ನು ಅಳವಡಿಸಲಾಗಿದೆ. ಇದ್ದಲ್ಲಿ, ಅವು ಯಾವುದೇ ಮಾರುಕಟ್ಟೆ ಮೌಲ್ಯವನ್ನು ಹೊಂದಿರುವುದಿಲ್ಲ. ಉಲ್ಲೇಖಿಸಿದ ಅವಧಿಯೊಳಗೆ ಬಡ್ಡಿಯೊಂದಿಗೆ ಸಾಲವನ್ನು ಮರುಪಾವತಿ ಮಾಡಲು ನಾನು ಸಮ್ಮತಿಸುತ್ತೇನೆ. ಈ ಮೇಲಿನ ನಿಯಮ ಮತ್ತು ಷರತ್ತುಗಳನ್ನು ನನಗೆ ವಿವರಿಸಲಾಗಿದೆ ಮತ್ತು ನಾನು ಸಮ್ಮತಿಸಿದ್ದೇನೆ.

36. ಸಾಲಕ್ಕೆ ಅನ್ವಯವಾಗುವ ನ್ಯಾಯೋಚಿತ ಕಾರ್ಯಾಭ್ಯಾಸ ನೀತಿಯು ಕಂಪನಿಯ ವೆಬ್‌ಸೈಟ್ www.unimoni.in ನಲ್ಲಿ ಲಭ್ಯವಿದೆ.

**ಸ್ಥಳ :** **ಗ್ರಾಹಕರ ಸಹಿ : .........**

**ದಿನಾಂಕ :**